**<u>ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ</u>**

**<u>ಸಿ.ಸಿ.ನಂಃ 643/2024</u>**

**<u>ಫಿರ್ಯಾದುದಾರುಃ</u>** ಸರ್ಕಾರದ ಪರವಾಗಿ ಅಜ್ಜಂಪುರ ಪೊಲೀಸರು

:**ವಿರುದ್ಧ**:

**<u>ಆರೋಪಿಃ</u>** ಶ್ರೀ ರಿಯಾಜ್,
ಬಿನ್ ಖಲೀಲ್
ಯಾನೆ ಸ್ಟೆಯದ್ ಖಲೀಲ್,
40 ವರ್ಷ,
ವಾಸ : ಹುಣಸೇಕಟ್ಟೆ ಗ್ರಾಮ,
ಗುರುಪುರ ಅಂಚೆ,
ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ

**<u>ಆಪಾದನೆಯ ಸಾರಾಂಶ</u>**

ಶ್ರೀ. ರಾಹುಲ್ ಶೆಟ್ಟಿಗಾರ್, ಬಿ.ಕಾಂ.(Hons.), ಎಲ್ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ತರೀಕೆರೆ ಆದ ನಾನು ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ 25.02.20242 ರಂದು ಮಧ್ಯರಾತ್ರಿ 12.50 ಗಂಟೆಯಲ್ಲಿ ಅಂತರಘಟ್ಟೆ ಜಾತ್ರೆ ಮುಗಿಸಿಕೊಂಡು ಮುಂಡ್ರೆ ಗ್ರಾಮಕ್ಕೆ ಹೋಗಲು ಅಜ್ಜಂಪುರ ಪೋಲೀಸ್ ಠಾಣಾ ಸರಹದ್ದಿನ ಮಲ್ಲೇನಹಳ್ಳಿ ಗೇಟ್ ಬಳಿ ಅಜ್ಜಂಪುರ–ಬೀರೂರು ರಸ್ತೆ ರಾಜ್ಯ ಹೆದ್ದಾರಿ 76 ರಲ್ಲಿ ಚಾಸಾ–1/ ಶ್ರೀ ನಾಗರಾಜನಾಯ್ಕ ಹಾಗೂ ಚಾಸಾ–11/ ಶ್ರೀ ರಾಜಾನಾಯ್ಕ ರವರು ಮುಂದಿನ ಎತ್ತಿನ ಗಾಡಿಯನಲ್ಲಿ ಹೋಗುತ್ತಿದ್ದು, ಹಿಂದುಗಡೆ ಚಾಸಾ–7/ ಶ್ರೀ ಲೋಕೇಶ್ ನಾಯ್ಕ ರವರ ಬಾಬ್ತು ಎತ್ತಿನ ಗಾಡಿಯಲ್ಲಿ ಚಾಸಾ–7, ಚಾಸಾ–8/ ಶ್ರೀ ತಿಪ್ಪೇಶನಾಯ್ಕ, ಚಾಸಾ–9/ ಶ್ರೀ ರಕ್ಷಿತಾ ಮತ್ತು ಚಾಸಾ–10/ ಶ್ರೀ ಅರ್ಚನಾ ರವರು ರಸ್ತೆಯ ಎಡಭಾಗದಲ್ಲಿ ಹೋಗುತ್ತಿರುವಾಗ, ಅಜ್ಜಂಪುರದ ಕಡೆಯಿಂದ ಬೀರೂರು ಕಡೆಗೆ ಆರೋಪಿಯಾದ ನೀವು ಕೆಎ.04.ಎಎ.6913 ರ ಟಯೋಟಾ ಇಟಿಯೋಸ್ ಕಾರನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಚಾಸಾ–7 ರವರು ಓಡಿಸುತ್ತಿದ್ದ ಎತ್ತಿನ

ಗಾಡಿಗೆ ಹಿಂದಿನಿಂದ ಡಿಕ್ಕಿ ಹೊಡೆಸಿರುತ್ತೀರಿ. ಈ ರೀತ್ಯ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 279 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮೇಲ್ಕಂಡ ಕಾರನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚಾಸಾ–7 ರವರು ಓಡಿಸುತ್ತಿದ್ದ ಎತ್ತಿನ ಗಾಡಿಗೆ ಹಿಂದಿನಿಂದ ಡಿಕ್ಕಿ ಹೊಡೆಸಿದ ಪರಿಣಾಮ ಎತ್ತಿನ ಗಾಡಿ ಪಲ್ಟಿಯಾಗಿ ಎತ್ತಿನ ಗಾಡಿಯಲ್ಲಿದ್ದ ಚಾಸಾ–7 ರವರ ಎಡಕಾಲಿಗೆ, ಮಂಡಿಗೆ, ಚಾಸಾ–9 ರವರ ತಲೆಯ ಬಲಭಾಗ ಮತ್ತು ಬಲಕಾಲಿನ ಮಂಡಿಯ ಬಳಿ ಹಾಗೂ ಚಾಸಾ–10 ರವರ ತಲೆಗೆ ಹಾಗೂ ಮೂಗಿನ ಬಳಿ ಸಾಮಾನ್ಯ ಸ್ವರೂಪದ ಗಾಯಗಳಾಗಿಸಿರುತ್ತೀರಿ. ಈ ರೀತ್ಯ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 337 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮೇಲ್ಕಂಡ ಕಾರನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚಾಸಾ–7 ರವರು ಓಡಿಸುತ್ತಿದ್ದ ಎತ್ತಿನ ಗಾಡಿಗೆ ಹಿಂದಿನಿಂದ ಡಿಕ್ಕಿ ಹೊಡೆಸಿದ ಪರಿಣಾಮ ಎತ್ತಿನ ಗಾಡಿ ಪಲ್ಟಿಯಾಗಿ ಎತ್ತಿನ ಗಾಡಿಯಲ್ಲಿದ್ದ ಚಾಸಾ–8 ರವರ ಬಲಗಾಲಿಗೆ ಹಾಗೂ ತಲೆಯ ಎಡಭಾಗಕ್ಕೆ ತೀವ್ರ ಸ್ವರೂಪದ ಗಾಯಗಳಾಗಿಸಿರುತ್ತೀರಿ. ಈ ರೀತ್ಯ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 338 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ಮೇಲ್ಕಂಡ ಕಾರನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚಾಸಾ–7 ರವರು ಓಡಿಸುತ್ತಿದ್ದ ಎತ್ತಿನ ಗಾಡಿಗೆ ಹಿಂದಿನಿಂದ ಡಿಕ್ಕಿ ಹೊಡೆಸಿದ ಪರಿಣಾಮ ಎತ್ತಿನ ಗಾಡಿ ಪಲ್ಟಿಯಾಗಿ ಅದರಲ್ಲಿಯ ಒಂದು ಎತ್ತು ದಿನಾಂಕ 21.03.2024 ರಂದು ಮೃತಪಟ್ಟು ಸುಮಾರು ರೂ.55,000/- ಗಳಷ್ಟು ಹಾನಿಯುಂಟಾಗಿರುತ್ತದೆ. ಈ ರೀತ್ಯ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 429 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಮೇಲ್ಕಂಡ ಕಾರನ್ನು ಅಪಘಾತ ಮಾಡಿದ ನಂತರ ಗಾಯಾಳುವಿಗೆ ಚಿಕಿತ್ಸೆಯನ್ನು ಕೊಡಿಸದೆ ಮತ್ತು ಸ್ಥಳೀಯ ಪೋಲೀಸರಿಗೆ ಯಾವುದೇ ಮಾಹಿತಿಯನ್ನು ತಿಳಿಸದೆ ಸ್ಥಳದಿಂದ ಪರಾರಿಯಾಗಿರುತ್ತೀರಿ. ಈ ರೀತ್ಯ ಆರೋಪಿಯಾದ ನೀವು ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ 187ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

**ಪ್ರಶ್ನೆ:1–** ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದ್ದೀರಾ? ಅದು ನಿಮಗೆ ಅರ್ಥವಾಯಿತೇ?

**ಉತ್ತರ:** Yes

**ಪ್ರಶ್ನೆ:2–** ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ನಿಮಗೆ ಯಾವುದಾದರೂ ಪ್ರತಿರಕ್ಷಣೆ ಇದೆಯೇ ?

**ಉತ್ತರ:** Pleaded not guilty and submitted that he has defence to make

(ಈ ಮೇಲ್ಕಂಡ ಅಪಾದನೆಯನ್ನು ನಾನೇ ಸ್ವತಃ ಆರೋಪಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ. )

**ದಿನಾಂಕ: 21.12.2024.**

ಸಹಿ/–

**(ರಾಹುಲ್ ಶೆಟ್ಟಿಗಾರ್)**
**ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ**
**ಪ್ರ.ದ.ನ್ಯಾದಂ., ತರೀಕೆರೆ**

**ಆರೋಪಿಯ ಸಹಿ:**